# ಲೌಕಿಕ ಬಲಿದಾನ ಮರಣಕ್ಕೆ ವಚನಕಾರರ ಪ್ರತಿಕ್ರಿಯೆ

## Loukika Balidana Maranakke Vachanakara Prathikriya

***C.A.Ramesh, Associate Professor of Kannada, Govt. First Grade College, Kolara**

ವಚನಕಾರರು ಸ್ವ ಅನುಭವದಿಂದ ವಚನಗಳನ್ನು ರಚನೆ ಮಾಡುವುದರ ಮೂಲಕ ಸೃಷ್ಟಿ, ಪರವಸ್ತು, ಶಿವಲಿಂಗ, ದೇವರು, ಕೃಪೆ, ಗುರುಕಾರುಣ್ಯ ದಾನ, ಧ್ಯಾನ, ಗುರು, ಶಿಷ್ಯ, ಸ್ಥಾವರಲಿಂಗ, ಇಷ್ಟಲಿಂಗ, ಭಕ್ತ, ಜಂಗಮ, ಸತ್ಯ, ಅಸತ್ಯ, ಹಿಂಸೆ, ಅಹಿಂಸೆ, ಮೃದು ವಚನ, ವಿನಯ, ಕಾಯಕ, ದಾಸೋಹ, ಸದ್ಭಕ್ತಿ, ಭವಿ, ಜಾತಿ, ಕುಲ, ಶೀಲ, ಜಪ, ತಪ, ವ್ರತ, ಉಪವಾಸ, ತೀರ್ಥ ಕ್ಷೇತ್ರ ಪ್ರಾಣಲಿಂಗ, ಪ್ರಸಾದ, ಯೋಗ, ಸಾಮರಸ್ಯಗಳೆಂಬ ಮೊದಲಾದ ವಿಷಯಗಳ ವಿಚಾರಗಳನ್ನು ಜನತೆಗೆ ಬೋಧಿಸಿದರು. ಈ ಮೂಲಕ ಜನತೆಯಲ್ಲಿ ಪರಿಶುದ್ಧ ಬದುಕನ್ನು ನಿರ್ಮಾಣ ಮಾಡಿ ಪರಿಶುದ್ಧ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದರು.

ಕನ್ನಡ ಸಾಹಿತ್ಯ ಸಂಸ್ಕೃತಿಗಳು ವೈವಿಧ್ಯತೆಯನ್ನು ಪಡೆದಿವೆ. ಈ ವೈವಿಧ್ಯತೆಗಳು ಹಿಂದಿನ ಕಾಲದಲ್ಲಿ ಜನರು ಅನುಸರಿಸಿದ ಆದರ್ಶ, ಮೌಲ್ಯಗಳ ಕಾರಣಗಳಿಂದ ನಿರ್ಮಾಣವಾಗಿವೆ. ಪ್ರಾಚೀನವಾಗಿ ಕರ್ನಾಟಕ ಜನತೆಯಲ್ಲಿ ಕಂಡು ಬಂದ ವೈವಿಧ್ಯಾತ್ಮಕ ಮೌಲ್ಯ ಆದರ್ಶಗಳಲ್ಲಿ ಮಹಾಮರಣವು ಪ್ರಮುಖವಾದುದಾಗಿದೆ. ಈ ಮಹಾಮರಣ ಮೌಲ್ಯವು ಮರಣದ ವಿಚಾರದಲ್ಲಿ ಹಿಂದಿನ ಜನತೆ ಅನುಸರಿಸಿದ ವಿಶಿಷ್ಟ ಸಂಪ್ರದಾಯ ಆದರ್ಶಗಳನ್ನು ತಿಳಿಸುವ ಪರಿಕಲ್ಪನೆಯಾಗಿದೆ. ಈ ಮಹಾಮರಣ ಪರಿಕಲ್ಪನೆಯಲ್ಲಿ ಲೌಕಿಕ ಕವಿಗಳು ಹೇಳಿದಂತೆ ವೀರಮರಣ, ಬಲಿದಾನಮರಣ ಸೇರಿದ್ದು ಹಲವಾರು ಬಗೆಯ ಧಾರ್ಮಿಕ ಮರಣಗಳು ಇದರಲ್ಲಿ ಸೇರಿವೆ. ಇಂತಹ ಮರಣಗಳು ಅಂದಿನ ಜನರಲ್ಲಿ ವಿಶಿಷ್ಟವಾದ ಮನೋಭಾವದಲ್ಲಿ ನಡೆದುಕೊಂಡು ಬಂದ ಆಚರಣೆಗಳಾಗಿವೆ. ಈ ಮರಣ ಆಚರಣೆಯು ಲೌಕಿಕವಾಗಿ ಕೀರ್ತಿಯ ಮೇಲಿನ ಆಸೆಯಿಂದ ನಡೆದುಕೊಂಡು ಬಂದಿದ್ದು ಧಾರ್ಮಿಕವಾಗಿ ಇಂತಹ ಮರಣ ಸಂಪ್ರದಾಯಗಳು ಹರಕೆ ತೀರಿಸುವ ಮನೋಭಾವದಲ್ಲಿ ನಡೆದುಕೊಂಡು ಬಂದಿವೆ. ವೀರಸೈನಿಕನೊಬ್ಬ ರಾಜನಿಗೆ ಸೇವೆಯನ್ನು ಸಲ್ಲಿಸುವ ಭಾವನೆಯಲ್ಲಿ, ರಾಜಾಜ್ಞೆಯನ್ನು ಪಾಲಿಸುವ ಬಗೆಯಲ್ಲಿ ಲೌಕಿಕ ಮರಣಗಳು ನಡೆದುಕೊಂಡು ಬಂದಿವೆ. ಇಂತಹ ಆಚರಣೆಗಳು, ಜನತೆಯ ಭಾವನೆಯಲ್ಲಿ ವಿಶಿಷ್ಟವೆನಿಸಿ 'ಮಹಾಮರಣ'ಗಳೆನ್ನಿಸಿಕೊಂಡಿವೆ. ಇಂತಹ ಮರಣಗಳು ಪ್ರಾಚೀನ ಕಾಲದಿಂದಲು ಕರ್ನಾಟಕದಲ್ಲಿ ಹಲವಾರು ಬಗೆಯಲ್ಲಿ ನಡೆದುಕೊಂಡು ಬಂದಿವೆ. ಲೌಕಿಕ ಕಾವ್ಯಗಳು ಈ ಬಗೆಯ ಮರಣಗಳನ್ನು ಪೆಣ್ಬುಯ್ಯಲ್, ತುರುಗೋಳ್, ಯುದ್ಧ ವೀರಮರಣ ಸೇರಿದಂತೆ ಆಳ್ತನದ ಸೇವೆಯಲ್ಲಿ ನಡೆಯುವ ಜೋಳವಾಟಿ, ವೇಳೆವಾಟಿ, ಲೆಂಕವಾಟಿ, ಗರುಡರು, ಕೀಟ್ಟುಗಂಟೆ ಎಂಬ ಮೊದಲಾದ ಮರಣ ಪ್ರಕಾರಗಳನ್ನು ಮಹಾಮರಣ ಪದ್ಧತಿಗಳಲ್ಲಿ ಗುರುತಿಸಿದ್ದು ಇವೆಲ್ಲ ಮಹಾಮರಣ ಸಂಪ್ರದಾಯಗಳಾಗಿವೆ.

ಈ ಮಹಾಮರಣಗಳೆಲ್ಲ ಮುಖ್ಯವಾಗಿ ಲೌಕಿಕ, ಆಗಮಿಕ ಕಾವ್ಯ ಪರಂಪರೆಯಲ್ಲಿ ಚರ್ಚೆಯಾಗಿವೆ. ಆದರೆ ಈ ಮರಣ ಮೌಲ್ಯಗಳನ್ನು ವಚನಕಾರರು ಮಧ್ಯಕಾಲೀನ ಸಂದರ್ಭದಲ್ಲಿ ಭಿನ್ನವಾಗಿ ಚರ್ಚೆ ಮಾಡಿದ್ದಾರೆ. ಪ್ರಾಚೀನ ಕಾಲದಲ್ಲಿ ರಾಜ ವ್ಯವಸ್ಥೆಯ ಸೇವಕತನದಲ್ಲಿ ನೆಡೆಯುವ ಬಲಿದಾನ ಮರಣಗಳನ್ನು ವಚನಕಾರರು ಶೋಷಣೆಯ ರೂಪಗಳಾಗಿ ನೋಡುತ್ತಾರೆ. ಈ ಮೂಲಕ ಅವರು ರಾಜವ್ಯವಸ್ಥೆಯನ್ನು ದಿಕ್ಕರಿಸಿ ವಚನಗಳನ್ನು ಬರೆಯುವುದರ ಮೂಲಕ ಅಂತಹ ಮರಣ ಪದ್ಧತಿಗಳನ್ನು ತಿರಸ್ಕರಿಸಿದ್ದಾರೆ. ಹಾಗೆಯೇ ವಿವೇಕ ಮತ್ತು ವಿವೇಚನೆಗಳಿಂದ ಭಿನ್ನವಾದ ಮರಣ ಪದ್ಧತಿಗಳನ್ನು ಸ್ವೀಕಾರ ಮಾಡಿಕೊಳ್ಳುವ ಮೂಲಕ ಮಹಾಮರಣ ಮರಣ ಸಂಪ್ರದಾಯಗಳನ್ನು ವೈಚಾರಿಕ ಮನೋಭಾವದಲ್ಲಿ ಚಿಂತನೆ ಮಾಡಿದ್ದಾರೆ. ಹೀಗೆ ಮರಣದ ಬಗ್ಗೆ ಚಿಂತನೆ ಮಾಡುವ ವಚನಕಾರರು ಮರಣಕ್ಕೆ ಅಂಜಿದವರಲ್ಲ ಅಳುಕಿದವರಲ್ಲ ಅವರು ಮರಣ ಬಂದಾಗ ಅದನ್ನು ಮುಕ್ತವಾಗಿ ಸಂಭ್ರಮದಿಂದ ಸ್ವೀಕರಿಸಿದವರು. ಇವರು ಮರಣದ ವಿಚಾರದಲ್ಲಿ 'ಆಯುಷ್ಯ ತೀರಿದಲ್ಲದೆ ಮರಣವಿಲ್ಲ,'[3] ಎಂಬ ನಂಬಿಕೆ ಹೊಂದಿದವರು. ಕಾಯಕ್ಕೆ ಅಂಜಿ ಬದುಕಿದ ಇವರು ಕಾಯದ ರಕ್ಷಣೆಗಾಗಿ ಯಾರನ್ನು ಬೇಡಿದವರಲ್ಲ ತಮ್ಮ ಜೀವನದಲ್ಲಿ

> **'ಯುದ್ಭಾವಂ ತದ್ಭವತಿ'**
> **ಉರಿಬರಲಿ, ಸಿರಿಬರಲಿ**
> **ಬೇಕು ಬೇಡೆನ್ನೆನಯ್ಯ![4]**

ಎಂದು ಬದುಕಿದವರು. ಯಾವತ್ತು ಇವರು ಸಾವನ್ನು ಎದುರಿಸಿ ಸಾವನ್ನು ಗೆದ್ದವರು. ನಾಳೆ ಬರುವ ಸಾವನ್ನು ಇಂದೇ ಆಹ್ವಾನಿಸಿದವರು. ಇದನ್ನೇ ಬಸವಣ್ಣ.[5]

> **'ನಾಳೆ ಬಪ್ಪುದು ನಮಗಿಂದೇ ಬರಲಿ**
> **ಇಂದು ಬಪ್ಪುದು ನಮಗೀಗಲೇ ಬರಲಿ**
> **ಇದಕಾರಂಜುವರು? ಇದಕಾರಳುಕುವರು**
> **'ಜಾತಸ್ಯ ಮರಣಂ ಧ್ರುವಂ' ಎಂಬುದಾಗಿ!!**

ಎಂದು ಹೇಳುವ ಮೂಲಕ 'ಹುಟ್ಟಿದವರು ಸಾಯಲೇ ಬೇಕು' ಎಂಬ ಲೋಕ ಜೀವನದ ಪರಮ ಸತ್ಯವನ್ನು ಈ ಮೂಲಕ ಹೇಳಿದ್ದಾರೆ. ನಾಳೆ ಬರುವ ಸಾವಿಗೆ ಕಾಯದೆ ಅಂಜದೆ, ಅಳುಕದೆ ಇರುವ ಅವರು ಹೆಮ್ಮೆಯಿಂದ ಇಂದೇ ಸಾವನ್ನು ಪಡೆಯುವ ಸಂಭ್ರಮದಲ್ಲಿ ಬದುಕುವ ತಾತ್ವಿಕತೆ ಹೊಂದಿದ ಅದ್ಭುತ ವಿಚಾರವಾದಿಗಳು ವಚನಕಾರರಾಗಿದ್ದರು. ಇವರು ಜನರಲ್ಲಿ ಇಂತಹ ವಿಚಾರಗಳನ್ನು ಪ್ರಸಾರ ಮಾಡುವ ಮೂಲಕ ಬದುಕನ್ನು ಬದಲಾಯಿಸಿದರು. ಜನಸಾಮಾನ್ಯರಲ್ಲಿ ಮರಣದ ಬಗ್ಗೆ ಭಯವನ್ನು ದೂರಮಾಡಿ ಸಂಭ್ರಮದಿಂದ ಹುಟ್ಟನ್ನು ಸ್ವೀಕರಿಸಿದಂತೆ ಸಾವನ್ನು ಸಂಭ್ರಮದಿಂದ ಸ್ವೀಕರಿಸುವ ಮನೋಭಾವವನ್ನು ಬೆಳೆಸಿದರು. ಮಧ್ಯಕಾಲೀನ ಸಂದರ್ಭದಲ್ಲಿ ವಚನಕಾರರು ಲಿಂಗದಿಂದಪ್ಪುವ ಮರಣಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿ ಒಳ್ಳೆಯ ವ್ಯಕ್ತಿತ್ವದಿಂದ ಒಳ್ಳೆಯ ಕೆಲಸಗಳನ್ನು ಮಾಡಿದರೆ ಒಳ್ಳೆಯ ಮರಣ ಸಂಪಾದನೆಯಾಗುತ್ತದೆ ಎಂಬ ನಂಬಿಕೆ ತಿಳಿಸಿದರು. ಇವರು ಯುದ್ಧದಲ್ಲಿ ಹೋರಾಡುತ್ತಾ ಮಡಿದರೆ ಸ್ವರ್ಗ ದೊರೆಯುತ್ತದೆ ಎಂಬ ಪ್ರಾಚೀನರ ನಂಬಿಕೆಯನ್ನು ತಿರಸ್ಕರಿಸಿ ವೀರತನದಲ್ಲಿ ನಂಬಿಕೆ ಹೊಂದಿದ ಅವರು ಧರ್ಮ ಪ್ರತಿಷ್ಠಾಪನೆಗೆ ವೀರತನದ ಅಗತ್ಯತೆಯನ್ನು ಪ್ರಸ್ತಾಪಿಸಿ ಅಂತಹ ಮೌಲ್ಯವನ್ನು ವೀರವ್ರತ, ವೀರಮಾಹೇಶ್ವರರಂತಹ ಆಚರಣೆಗಳಲ್ಲಿ ಗುರುತಿಸಿ ಹೇಳಿದರು.

ಬಹುಪಾಲು ಮರಣದ ಬಗ್ಗೆ ವೀರಶೈವರು ಲಿಂಗವಿಲ್ಲದೆ ಮರಣವಿಲ್ಲ ಎಂಬ ನಂಬಿಕೆಯನ್ನು ಹೊಂದಿದ್ದರು. ಅದಕ್ಕೆ ಬಸವಣ್ಣನವರು[6]

**ನರೆ ಕೆನ್ನೆಗೆ ತೆರೆ ಗಲ್ಲಕೆ**
**ಶರೀರ ಗೂಡು ಹೋಗದ ಮುನ್ನ**
**ಹಲ್ಲು ಹೋಗಿ, ಬೆನ್ನು ಬಾಗಿ**
**ಅನ್ಯರಿಗೆ ಹಂಗಾಗದ ಮುನ್ನ**
**ಕಾಲ ಮೇಲೆ ಕೈಯನೂರಿ**
**ಕೋಲ ಹಿಡಿಯದ ಮುನ್ನ**
**ಮುಪ್ಪಿಂದೊಪ್ಪವಳಿಯದ ಮುನ್ನ!**
**ಮೃತ್ಯುಮುಟ್ಟದ ಮುನ್ನ ಪೂಜಿಸುವೇ ಕೂಡಲಸಂಗಮದೇವನ**

ಎಂಬ ಮಾತು ಈ ನಂಬಿಕೆಯನ್ನು ತಿಳಿಸುತ್ತದೆ. ವಚನಕಾರರು ಹುಟ್ಟಿನಂತೆಯೇ ಸಾವು ಒಂದು ಪರಮ ಪುಣ್ಯವೆಂದು ನಂಬಿದ್ದರು. ಯಾವತ್ತು ಅವರು ಕಾಯವನ್ನು ದಂಡಿಗೆ ಮಾಡಿ, ಶಿರವನ್ನು ಸೋರೆಕಾಯಿ ಮಾಡಿ, ನರವನ್ನು ತಂತಿ ಮಾಡಿ, ಬೆರಳನ್ನು ಕಡ್ಡಿಯ ಮಾಡಿ, ಬತ್ತೀಸರಾಗದ ಮೂಲಕ ಶಿವಾರ್ಪಣೆಗಾಗಿ ದೇಹವನ್ನು ಭಕ್ತಿಯಿಂದ ನುಡಿಸುವರಾಗಿದ್ದರು. ಅಲ್ಲದೆ ಶಿವನಿಗಾಗಿ ಎಂತಹ ಸಂದರ್ಭದಲ್ಲಿ ಪ್ರಾಣವನ್ನು ನೀಡುವಂತರಾಗಿದ್ದು ಇವರೆಲ್ಲ ಕಣ್ಣು, ಕೈ, ಕಾಲು, ನಾಲಿಗೆ, ಕಿವಿ, ನಾಸಿಕ, ತನು, ಶಿವನ ಮೀಸಲು ಎಂದು ಒಪ್ಪಿಕೊಂಡವರಾಗಿದ್ದರು.[7] ಈ ಕಾರಣಕ್ಕೆ ಅಕ್ಕ ಮಹಾದೇವಿಯವರು[8] ತಮ್ಮ ಆಧ್ಯಾತ್ಮಿಕ ಜೀವನದ ಸಾಧನೆಯಿಂದ ದೇಹದ ಬಗ್ಗೆ ತಿರಸ್ಕಾರದ ಮನೋಭಾವ ಹೊಂದಿದ್ದು ತಮ್ಮ ವಚನದಲ್ಲಿ **'ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ, ಎಲುಬಿನ ತಡಿಕೆ, ಕೀವಿನ ಹಡಿಕೆ',**ಎಂದು ಹೇಳಿದರು ದೇಹದ ಬಗ್ಗೆ ನಿಸ್ಸಾರತೆ ಹೊಂದಿದ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ ಸಹವಾಸದ ಮೂಲಕ ಸಾವನ್ನು ಮೀರಿದ ಬದುಕನ್ನು ಆಧ್ಯಾತ್ಮದಲ್ಲಿ ನಡೆಸಿಕೊಂಡ ಬಗೆಯಲ್ಲಿ ಅಕ್ಕನ ಬದುಕು-ಬಯಕೆ ಒಂದು ಮೌಲ್ಯವಾಗಿ ಸಾಹಿತ್ಯದಲ್ಲಿ ರೂಪಗೊಂಡಿರುವುದನ್ನು ಕಾಣುತ್ತೇವೆ. ಚಂದಿಮರಸ[9] ಎಂಬ ವಚನಕಾರರ 'ಸಾವು ತಡವಲ್ಲ ನರಕ ದೂರವಲ್ಲ' ಎಂದು ಹೇಳಿದರು ಗುರುಭಕ್ತಿಯ ಮೂಲಕ ನರಕ ದೂರವಾಗುವುದನ್ನು ತಿಳಿಸಿದ್ದಾರೆ. ಈ ಮೂಲಕ ಸಾವಿನ ಕ್ಷಣಿಕತೆಯನ್ನು ತಿಳಿಸಿದ್ದಾರೆ. ಒಟ್ಟಾರೆ ಸಾವಿನ ವಿಚಾರದಲ್ಲಿ ವಚನಕಾರರೆಲ್ಲ ಅದ್ಭುತ ವಿಚಾರವಾದಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಬಸವಣ್ಣ ಬಿಜ್ಜಳನ ವ್ಯವಸ್ಥೆಯನ್ನು ತಿರಸ್ಕರಿಸಿ ಬಂದ ನಂತರ ಅವರಿಗೂ ರಾಜ ವ್ಯವಸ್ಥೆಯ ಊಳಿಗದಲ್ಲಿ ನಡೆದುಕೊಂಡು ಬಂದಿದ್ದ ಲೌಕಿಕ ಬಲಿದಾನ ಮರಣ ಸಂಪ್ರದಾಯಗಳನ್ನು ತಿರಸ್ಕರಿಸುವಂತೆ


**"ಜೋಳವಾಳಿಯಾನಲ್ಲ,!**
**ವೇಳೆವಾಳಿಯವ ನಾನಯ್ಯ!**
**ಹಾಳುಗೆಟ್ಟೋಡುವಾಳು ನಾನಲ್ಲವಯ್ಯ,**
**ಕೇಳು, ಕೂಡಲ ಸಂಗಮದೇವ**
**ಮರಣವೇ ಮಹಾನವಮಿ"**[10]

ಎಂದು ಹೇಳುವ ಮೂಲಕ ಮರಣವನ್ನು ಮಹಾನವಮಿ ಹಬ್ಬದ ಸಂಭ್ರಮದಲ್ಲಿ ಸ್ವೀಕರಿಸಿರುವುದನ್ನು ಕಾಣುತ್ತೇವೆ. ಈ ಮಾತನ್ನು ಹೇಳುವ ಮೂಲಕ ಬಸವಣ್ಣ ಲಿಂಗನಿಷ್ಠೆಯಲ್ಲಿ ಜೋಳದ ಒಡೆಯ ಲಿಂಗವೆ ಆಗಿದ್ದು ಆ ಲಿಂಗದೊಡೆಯನಿಗೆ ವೇಳೆವಾಟಿತನದಲ್ಲಿ ನಡೆದುಕೊಳ್ಳುವ ವಿಶಿಷ್ಟ ಮರಣ ಮೌಲ್ಯಗಳನ್ನು ಧಾರ್ಮಿಕವಾಗಿ ನಿರ್ಮಾಣ ಮಾಡಿದ್ದಾರೆ. ಇಲ್ಲಿ ಹಿಂದೆ ರಾಜ್ಯವ್ಯವಸ್ಥೆಯಲ್ಲಿ 'ಸ್ವಾಮಿಭೃತ್ಯ ಸಂಬಂಧ'ವಿದ್ದಂತೆ ಈ ಮನೋಭಾವವನ್ನು ವಚನಕಾರರು ಲಿಂಗನಿಷ್ಠೆಗೆ ಪರಿವರ್ತಿಸಿದ್ದಾರೆ. ಹಾಗೆಯೇ ಸತ್ಯವನ್ನು ನುಡಿಯುವ ನಡೆಯುವ ಮನೋಭಾವದಲ್ಲಿ ಇಂತಹ ಮೌಲ್ಯಗಳು ರಾಜವ್ಯವಸ್ಥೆಗೆ ವಿರೋಧವಾಗಿ ನಡೆದುಕೊಂಡು ಬಂದಿರುವುದನ್ನು ಈ ಮೂಲಕ ಗಮನಿಸಬಹುದು. ವಚನಕಾರರು ರಾಜವ್ಯವಸ್ಥೆಯ ವೀರಮರಣಗಳಲ್ಲಿ ತುರುಗೋಳ್ ಯುದ್ಧ ವೀರಮರಣ, ಪೆಣ್ಬುಯ್ಯಲ್ ವೀರಮರಣಗಳಿಗೆ ಧರ್ಮ ಭಕ್ತಿಯ ಸ್ಪರ್ಶಗಳನ್ನು ನೀಡುವುದರ ಮೂಲಕ ಈ ಆದರ್ಶಗಳನ್ನು ಮಾನವೀಯತೆಯ ನೆಲೆಯಲ್ಲಿ ಧೀಮಂತಗೊಳಿಸುತ್ತಾರೆ. ಪ್ರಾಣಿ ಬಲಿಯನ್ನು ವಿರೋಧಿಸುವ ವಚನಕಾರರು ಅಹಿಂಸೆಯ ತತ್ವವನ್ನು ಪ್ರೋತ್ಸಾಹಿಸುವಂತೆ ಯುದ್ಧ ವೀರಮರಣವನ್ನು ವಿರೋಧಿಸುತ್ತಾರೆ. ಅಲ್ಲದೆ ಪ್ರಾಣಿ, ಪಕ್ಷಿ ಬಲಿಗಳನ್ನು ವಿರೋಧಿಸುವ ಬಗೆಯಲ್ಲಿ ದಾಸಿಮಯ್ಯ[11]

**ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ**
**ಗೋರಿಗೊಳಿಸಿ ಕುರಿಯ ಕೊರಳನೆ**

**ಕೊಯಿದುಂಬ ಕ್ರೂರ ಕರ್ಮಿಗಳನವರ ಶಿವಭಕ್ತರೆನಬಹುದೆ?**
**ಆರಯ್ಯದೆ ಅವರ ಮನೆಯಲುಂಡ ಭಕ್ತನು**
**ಅಘೋರ ನರಕಕ್ಕಿಳಿವ ಕಾಣಾ ರಾಮನಾಥ**

ಎಂಬ ಮಾತನ್ನು ಹೇಳಿರುವುದನ್ನು ಗಮನಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ಈ ಮೂಲಕ ವಚನಕಾರರು ಪ್ರಾಣಿಗಳ ಜೀವಕ್ಕೆ ಗೌರವ ನೀಡಿ ಅವುಗಳು ತಮ್ಮಂತೆಯೇ ಎಂದು ಭಾವಿಸಿ ಅಮಾನುಷವಾಗಿ ಅವುಗಳನ್ನು ಕೊಲ್ಲುವ, ದೇವರಿಗಾಗಿ ಬಲಿಕೊಡುವ ಸಂಪ್ರದಾಯಗಳನ್ನು ವಿರೋಧಿಸಿದರು. ಈ ಮೂಲಕ ಪ್ರಾಣಿಗಳ ಮೇಲೆ ಕರುಣೆ ತೋರಿಸಿ ಹಿಂಸೆಯನ್ನು ವಿರೋಧಿಸುವುದನ್ನು ಕಾಣುತ್ತೇವೆ. ಹೀಗೆ ಪ್ರಾಣಿ ಪಕ್ಷಿಗಳ ಹತ್ಯೆಗಳಿಗೆ ಅವಕಾಶ ನೀಡದ ವಚನಕಾರರು ಪ್ರಾಚೀನವಾಗಿ ಹಿಂದಿನಿಂದಲು ದೈವದ ಮನೋಭಾವದಲ್ಲಿ ಆಚರಣೆಗೊಂಡು ಬಂದ ಉರಿಯ ಉಯ್ಯಲೆ, ಪುಣ್ಯಸ್ಥಳ ಜಲಪ್ರವೇಶ ಮರಣ, ಶರಣರು ಲಿಂಗಭಕ್ತರು ಕೊಟ್ಟಲಿಂಗ ಕಳೆದು ಹೋದರೆ ಆತ್ಮಹತ್ಯೆ ಮಾಡಿಕೊಳ್ಳುವ ಮೊದಲಾದ ಮರಣ ಆಚರಣೆಗಳನ್ನು ವಿರೋಧಿಸುವುದರ ಮೂಲಕ ಅಂತಹ ಅನಿಷ್ಟ ಮೂಢನಂಬಿಕೆಯ ಸಂಪ್ರದಾಯಗಳನ್ನು ಹೊಡೆದೋಡಿಸಿದರು. ಸರ್ವ ಜೀವಿಗಳನ್ನು ಗೌರವಿಸುವ ಭಾವನೆಯಲ್ಲಿ ದಯೆ, ಕರುಣೆ, ಅಹಿಂಸೆ ಮಾನವೀಯತೆಯ ಮೌಲ್ಯಗಳನ್ನು ನಿರ್ಮಾಣ ಮಾಡಿದರು. ಈ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ನಂಬಿಕೆಯಲ್ಲಿ ವಿಶ್ವಾಸ ಹೊಂದಿದ ಅವರು **'ದಯವಿಲ್ಲದ ಧರ್ಮವದೇವುದಯ್ಯಾ! ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯ। ದಯವೇ ಧರ್ಮದ ಮೂಲವಯ್ಯ'**[12] ಎಂಬ ಮೌಲ್ಯವನ್ನು ನಿರ್ಮಾಣ ಮಾಡಿದರು. ಈ ಮೂಲಕ ಪ್ರಾಣಿ ಬಲಿ, ಮನುಷ್ಯ ಬಲಿಯ ವಿರುದ್ಧ ತಿರುಗಿಬಿದ್ದು ಪ್ರತಿಕ್ರಿಯೆ ನೀಡಿದರು. ಮಧ್ಯಕಾಲೀನ ಸಂದರ್ಭದಲ್ಲಿ ಪ್ರಾಚೀನವಾಗಿ ನಡೆದುಕೊಂಡು ಬಂದಿದ್ದ ಇಂತಹ ಆಚರಣೆಗಳನ್ನು ವಚನಕಾರರು ತೊಡೆದು ಹಾಕಿದರು. ಅಲ್ಲದೆ ಪ್ರಾಣಿಬಲಿ ಮತ್ತು ಮಾನವರ ಆತ್ಮ ಬಲಿದಾನವನ್ನು ವಿರೋಧಿಸಿ ಆಯಾ ಧರ್ಮ ಆಧಾರಿತವಾಗಿ ಧಾರ್ಮಿಕ ಮನೋಭಾವದಲ್ಲಿ ನಡೆದುಕೊಂಡು ಬಂದ ಪುಣ್ಯಸ್ಥಳ ಜಲಪ್ರವೇಶ ಮರಣದ ಬಗ್ಗೆ ವಿರೋಧ ವ್ಯಕ್ತ ಪಡಿಸಿದರು. ಬಸವಣ್ಣನಂತಹ ವಚನಕಾರರು **'ನೀರ ಕಂಡಲ್ಲಿ ಮುಳುಗುವರಯ್ಯಾ।ಮರವ ಕಂಡಲ್ಲಿ ಸುತ್ತುರಯ್ಯಾ! ಬತ್ತುವ ಜಲವ ನೊಣಗುವ ಮರನ। ಮೆಚ್ಚಿದವರು ನಿಮ್ಮ ನೆತ್ತಬಲ್ಲರು ಕೂಡಲಸಂಗಮದೇವಾ'?**[13] ಎಂದು ಹೇಳುವ ಮೂಲಕ ವಿರೋಧವಾಗಿ ಪ್ರತಿಕ್ರಿಯೆ ನೀಡಿದರು. ಹೀಗೆ ಪ್ರಾಚೀನ ಕಾಲದಲ್ಲಿ ವೈಧಿಕ ಧರ್ಮಾನುಸಾರವಾಗಿ ನಡೆದುಕೊಂಡು ಬಂದ ಸಂಪ್ರದಾಯಗಳನ್ನು ತಿರಸ್ಕರಿಸಿ ಈ ಸಂಪ್ರದಾಯಗಳಲ್ಲಿದ್ದ ಮೂಢನಂಬಿಕೆಯನ್ನು ಬಯಲು ಮಾಡಿ ಅಂದಿನ ಕಾಲದಲ್ಲಿ ವ್ಯಕ್ತಿಗಳು ಅಂಧಶ್ರದ್ಧೆಗಳಿಂದ ಬೆಲೆಯುಳ್ಳ ಪ್ರಾಣಗಳನ್ನು ಕಳೆದುಕೊಳ್ಳುತ್ತಿದ್ದನ್ನು ತಪ್ಪಿಸಿದರು. ಇಂತಹ ಆಚರಣೆಗಳಿಗೆ ವಿರೋಧವಾಗಿ ಇಂತಹ ನಂಬಿಕೆ ಹೊಂದಿದವರಿಗೆ ಲಿಂಗ ಧರ್ಮದ ಮೂಲಕ ಅಂಗ ಲಿಂಗ ಸಂಬಂಧದಲ್ಲಿ ಲಿಂಗಕ್ಕೆ ಪ್ರಾಣ ನಿಲಿಸುವ ಬಗೆಯಲ್ಲಿ ಆತ್ಮಲಿಂಗವನ್ನು ಪ್ರಾಣವೆಂದು ಪರಿಭಾವಿಸಿಕೊಳ್ಳುವ ಪ್ರಾಣಲಿಂಗ ಭಾವನೆಯನ್ನು ಭಕ್ತಶರಣರಲ್ಲಿ ಬೆಳೆಸಿದರು. ಲಿಂಗನಿಷ್ಠ, ಧರ್ಮನಿಷ್ಠ ಆಚಾರಗಳನ್ನು ಅನುಸರಿಸುವಂತೆ ವಚನಕಾರರು ಈ ಮೂಲಕ ಕರೆ ನೀಡಿದರು. ಒಟ್ಟಾರೆ ಮಧ್ಯಕಾಲೀನ ಸಂದರ್ಭ ಪ್ರಾಚೀನವಾಗಿ ನಡೆದುಕೊಂಡು ಬಂದ ಬಲಿದಾನ ಮರಣಗಳ ಮಹಾಮರಣ ಪರಂಪರೆಗೆ ವಿವೇಚನಾಯುತ ಪ್ರತಿಕ್ರಿಯೆ ನೀಡುವುದರ ಮೂಲಕ ವಚನಕಾರರ ಬೌದ್ಧಿಕ ವಿವೇಚನೆಯಲ್ಲಿ ಹೊಸ ಸಂಪ್ರದಾಯ, ಮೌಲ್ಯ, ಆದರ್ಶಗಳು ಮಹಾಮರಣ ವಿಚಾರದಲ್ಲಿ ನಿರ್ಮಾಣವಾಗಲು ಸಾಧ್ಯವಾಯಿತು. ಮಧ್ಯಕಾಲೀನ ಸಂದರ್ಭದಲ್ಲಿ ವಚನಕಾರರ ಚಿಂತನೆಯಲ್ಲಿ ಬದಲಾದ ಮಹಾಮರಣ ಪರಂಪರೆಯನ್ನು ಈ ಕೆಳಗಿನ ನಕ್ಷೆಯಲ್ಲಿ ತೋರಿಸಲಾಗಿದೆ.




ಪರಿಕಲ್ಪನೆಗಳೆಲ್ಲ ಪ್ರಾಚೀನವಾಗಿ ನಡೆದುಕೊಂಡು ಬಂದವುಗಳಾಗಿದ್ದರು. ಮಧ್ಯಕಾಲೀನ ಸಂದರ್ಭದಲ್ಲಿಯೂ

ಈ ಮಹಾಮರಣ ಆದರ್ಶಗಳ ಪ್ರಸ್ತಾಪವಿದೆ. ಈ ಬಗೆಯ ಎಲ್ಲಾ ಮರಣ ಪರಂಪರೆಗಳನ್ನು ಮಧ್ಯಕಾಲೀನ ಸಂದರ್ಭದ ಕವಿಗಳು ಗುರುತಿಸಿದ್ದಾರೆ. ಇಲ್ಲಿ ಇವರೆಲ್ಲರು ಒಂದು ಆರೋಗ್ಯಪೂರ್ಣ ಸಮಾಜಕ್ಕೆ, ಧರ್ಮಕ್ಕೆ ಬೇಕಾದ ಆದರ್ಶಗಳನ್ನು ಸಮಾಜಮುಖಿಯಾಗಿ ಹೇಳುವ ಮೂಲಕ ಸರ್ವ ಜೀವಿಗಳ ಒಳಿತಿಗೆ ಬೇಕಾದ ಆದರ್ಶ ಮರಣ ಮೌಲ್ಯಗಳನ್ನು ಹೇಳುವ ಮೂಲಕ ಈ ಲೋಕವನ್ನು ಉದ್ಧಾರಗೊಳಿಸಿದ್ದಾರೆ. ಇಲ್ಲಿ ಇವರು ಉದಾತ್ತವಾದ ಬಾಳು ಬಾಳುಗೂಡು ವಸುಧೈವ ಕುಟುಂಬಕಂ, ಸರ್ವರಿಗೂ ಸಮಬಾಳು ಸರ್ವರಿಗು ಸಮಪಾಲು ಎನ್ನುವ ಬಗೆಯ ಧರ್ಮ, ಸಮಾಜ, ರಾಜಕೀಯ ಕ್ಷೇತ್ರಗಳ ಆದರ್ಶ ಮೌಲ್ಯಗಳನ್ನು ಉದಾತ್ತಗೊಳಿಸಿದ್ದಾರೆ. ಈ ಮೂಲಕ ಲೋಕೋದ್ಧಾರದ ಕಾರ್ಯ ಕೈಗೊಂಡಿದ್ದಾರೆ. ಇಲ್ಲಿ ವಚನಕಾರರು ಮಹಾಮರಣದಂತ ಮೌಲ್ಯ ಆದರ್ಶಗಳ ಮೂಲಕ ಬದುಕಿಗೆ ಸಹಾಯಕವಾಗುವ ಜ್ಞಾನ ವಿವೇಕಗಳನ್ನು ತಮ್ಮ ವಚನಗಳ ಸಂದೇಶಗಳಿಂದ ತಿದ್ದುವ ಮೂಲಕ ಮನುಕುಲದ ಉದ್ಧಾರಕ್ಕೆ ಸಾಕ್ಷಿಯಾಗಿದ್ದಾರೆ. ಆದರೆ ಈ ಧಾರ್ಮಿಕ ಬಲಿದಾನಗಳಲ್ಲಿ ದೇವರನ್ನು ಒಲಿಸಿಕೊಂಡು ಸ್ವರ್ಗವನ್ನು ಪಡೆಯುವ ಆಸೆಯಲ್ಲಿ ಪುನರ್‌ಜನ್ಮ ಪಡೆಯುವ ಕಾರಣದಲ್ಲಿ ಇಂತಹ ಅಮಾನುಷ ಜೀವಹತ್ಯೆಗಳು ಪಾರಂಪರಿಕವಾಗಿ ನಡೆದುಕೊಂಡು ಬಂದಿವೆ. ಇಂತಹ ಜೀವಹತ್ಯೆಗಳು ಅಂದಿನ ಕಾಲದಲ್ಲಿ ಜಲಪ್ರವೇಶ, ಊರ್ಧ್ವಪತನ, ಚಿತಾಪ್ರವೇಶ ವಿಧಾನಗಳಲ್ಲಿ ನಡೆದಿವೆ. ಹೀಗೆ ಹಿಂದಿನ ಕಾಲದಿಂದಲೂ ಇಂತಹ ಆಚರಣೆಗಳಿಂದ ಜನರು ಮರಣವನ್ನು ಪಡೆಯುತ್ತಿದ್ದರು. ಕರ್ನಾಟಕದಲ್ಲಿ ಸೂರ್ಯ ಭಕ್ತರಂತೆಯೇ ಲಿಂಗಭಕ್ತರು ಪ್ರಾಣತ್ಯಾಗ ಮಾಡಿಕೊಳ್ಳುತ್ತಿದ್ದರು. ಶಿವಭಕ್ತನಾದವನ ಲಿಂಗ ನದಿಯಲ್ಲಿ ಬೀಳಲಾಗಿ ಭಕ್ತನು ಪ್ರಾಣಾಘಾತ ಮಾಡಿಕೊಳ್ಳುತ್ತಿದ್ದನು. ಕೊಂಡಗುಳಿ ಕೇಶಿರಾಜ ಜೀವಘಾತ ಮಾಡಿಕೊಳ್ಳಲು ಸಿದ್ದನಾದ ಪ್ರಸಂಗ ಈ ಪರಂಪರೆಯನ್ನು ತಿಳಿಸುತ್ತದೆ.[14] ಡಾ.ಎಂ.ಎಂ.ಕಲಬುರ್ಗಿಯವರು[15] "ಬಸವ ಪೂರ್ವದ ಇಷ್ಟಲಿಂಗಧಾರಿಗಳಲ್ಲಿ ಲಿಂಗದ ಹೆಸರಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಸಂಪ್ರದಾಯವಿದ್ದಿತೆಂದು ಅದನ್ನು ನಿಲ್ಲಿಸಿದುದು ಶರಣಕ್ರಾಂತಿಯ ಒಂದು ಅಂಗವೆಂದು" ಹೇಳಿದ್ದಾರೆ. ಈ ಬಗೆಯ ಆತ್ಮಹತ್ಯೆಯನ್ನು ಚೆನ್ನಬಸವಣ್ಣನವರು[16] "ಶಸ್ತ್ರ ಸಮಾಧಿ ಜಲತಾಡನ ವನಾಂತರ ದಿಗ್ಬಲಿ ದಹನ" ಎಂದು ಆರು ತರನಾಗಿದ್ದಿತೆಂದು ತಿಳಿಸಿದ್ದಾರೆ. ಇಂತಹ ಮರಣಗಳ ವಿಚಾರಗಳು ಬಹು ವಚನಗಳಲ್ಲಿ ಬಂದಿದ್ದು ವಚನಕಾರರು ಇದನ್ನು ದುರ್ಮರಣ ಎಂದು ಕರೆದು ಚರ್ಚಿಸಿದ್ದಾರೆ. ಅಲ್ಲಮ ಪ್ರಭುಗಳು[17] ತಮ್ಮ ವಚನದಲ್ಲಿ

**ಅಂಗದೊಳಗೆ ಮಹಾಲಿಂಗವಿರಲು**
**ಕೈಯ ಲಿಂಗ ಬಿದ್ದಿತೆಂದು**
**ನೆಲದೊಳಗಂಗವ ಹೂಳುವರು**
**ಭಂಗ ಬಡುವರಲ್ಲಾ ಗುಹೇಶ್ವರಾ**
**ಲಿಂಗವನರಿಯದ ಜಡರುಗಳು**

ಎಂದು ಅಂಗೈಯೊಳಗಿನ ಲಿಂಗ ಬಿದ್ದಿತೆಂದು ನೆಲದೊಳಗೆ ಹೂಳಿಕೊಂಡು ಸಮಾಧಿ ಮರಣ ಪಡೆಯುವ ಭಕ್ತರನ್ನು ಜಡರು ಎಂದು ಕರೆಯುವ ಮೂಲಕ ವಿಡಂಭಿಸಿದ್ದಾರೆ. ಅಲ್ಲಮನಂತೆಯೇ ಚೆನ್ನಬಸವಣ್ಣ, ಮೋಳಿಗೆಯ ಮಾರಯ್ಯ, ಉರಿಲಿಂಗಪೆದ್ದಿ, ಸಿದ್ಧರಾಮ, ಮಹಾದೇವಿಯಕ್ಕ ಮೊದಲಾದವರು ಸಾಮೂಹಿಕವಾಗಿ ಇಂತಹ ಜೀವಹತ್ಯೆಗಳನ್ನು ವಿರೋಧಿಸಿ ಪ್ರತಿಕ್ರಿಯೆ ನೀಡಿದ್ದಾರೆ.

ವಚನಕಾರರು ಧಾರ್ಮಿಕ ಮರಣಗಳನ್ನು ವಿರೋಧಿಸಿದಂತೆಯೇ ಲೌಕಿಕ ನೆಲೆಯ ವೀರಮರಣ, ಅಗ್ನಿಪ್ರವೇಶ ಮರಣಗಳನ್ನು ವಿರೋಧಿಸಿದ್ದಾರೆ. ಇವರು 'ಕಾಂಚನಕ್ಕೆ ವೇಳೆಯಿಲ್ಲದೆ ಲಿಂಗಕ್ಕೆ ವೇಳೆಯಿಲ್ಲ'[18] ಎಂದು ವೀರಮರಣಕ್ಕೆ ಸಾಕ್ಷಿಯಾದ ವೇಳೆವಾಟಿ ಮರಣವನ್ನು ವಿರೋಧಿಸಿದರೆ ಷಣ್ಮುಖಸ್ವಾಮಿ[19] ಎಂಬ ವಚನಕಾರ **'ಗಂಡ ಸತ್ತನೆಂದು ಗಂಡನೊಡನೆ ಕೆಂಡವ ಬೀಳುವೆನೆಂದು । ಪುಂಡವೀರಸ್ತ್ರೀ'** ಎಂದು ಸತಿಪತಿ ಆದರ್ಶದಲ್ಲಿ ಸ್ತ್ರೀಯ ಅಗ್ನಿಪ್ರವೇಶದಿಂದ ನಡೆಯುವ ಮಹಾಸತಿ ಮರಣವನ್ನು ಶರಣರು ತಿರಸ್ಕರಿಸಿದ್ದಾರೆ. ಸಹಗಮನ ಕೈಗೊಳ್ಳುವ ಸ್ತ್ರೀಯನ್ನು ಲಂಡಸ್ತ್ರೀ, ಪುಂಡಸ್ತ್ರೀ ಎಂದು ಕರೆದಿದ್ದಾರೆ. ವಚನಕಾರರು ಶರಣರು ವೈಧಿಕ ಧರ್ಮ ಪ್ರಣೀತವಾಗಿ ನಡೆದುಕೊಂಡು ಬಂದ ಆದರ್ಶ ಮೌಲ್ಯದ ಇಂತಹ ಮರಣಗಳನ್ನು ಆರೋಗ್ಯ ಪೂರ್ಣ ಧರ್ಮ ಸಮಾಜಕ್ಕಾಗಿ ವಿರೋಧಿಸಿದ್ದಾರೆ. ಉತ್ತಮ ಸಮಾಜ ನಿರ್ಮಾಣಕ್ಕೆ ಬೇಕಾದ ದಾನ, ಧರ್ಮ, ದಾಸೋಹ, ಕಾಯಕ, ಮೃದುವಚನ ಮೊದಲಾದ ಆದರ್ಶ, ಮೌಲ್ಯಗಳ ಮೂಲಕ ಉತ್ತಮ ಜನ, ಸಂಸ್ಕೃತಿ, ರಾಷ್ಟ್ರನಿರ್ಮಾಣದ ಕಾರಣ ಕರ್ತೃಗಳಾಗಿದ್ದಾರೆ. ಹೀಗೆ ಪ್ರಾಚೀನವಾಗಿ ನಡೆದುಕೊಂಡು ಬಂದ ಮಹಾಮರಣ ಪರಿಕಲ್ಪನೆಗಳಿಗೆ ಮಧ್ಯಕಾಲೀನ ಸಂದರ್ಭದಲ್ಲಿ ಆ ಕಾಲದಲ್ಲಿನ ಕವಿಗಳು ಯಾವ ದೃಷ್ಟಿಕೋನದಲ್ಲಿ ನೋಡಿದರು. ಅವರು ಅವುಗಳನ್ನು ಪ್ರಶ್ನೆ ಮಾಡುವುದರ ಮೂಲಕ ಅಂತಹ ಆದರ್ಶ ಮೌಲ್ಯಗಳ ಮರಣ ಸಂಪ್ರದಾಯಗಳಿಗೆ ತಮ್ಮ ವಿಚಾರ ವಿವೇಕಗಳಿಂದ ಎಂತಹ ಚರ್ಚೆಗಳನ್ನು ಮಾಡಿದರು ಎಂಬುದನ್ನು ಈ ಕೆಳಗಿನಂತೆ ಚರ್ಚೆ ಮಾಡಿದ್ದೇನೆ.

**ಲೌಕಿಕ ಮಹಾಮರಣ (ಆತ್ಮಬಲಿದಾನ)**

ಬಲಿದಾನ ಎಂಬುದು ಪ್ರಾಣಾರ್ಪಣೆ, ಪ್ರಾಣತ್ಯಾಗ, ಆತ್ಮಬಲಿ, ಜೀವಹತ್ಯೆ, ಆತ್ಮಾಹುತಿ, ದೇಹತ್ಯಾಗ, ಮಹಾಮರಣ ಎಂಬ ಮೊದಲಾದ ಅರ್ಥಗಳನ್ನು ಪಡೆದುಕೊಂಡಿದೆ. ಪ್ರಾಚೀನ ಕಾಲದ ಕರ್ನಾಟಕದಲ್ಲಿ ರಾಜಕೀಯ, ಧಾರ್ಮಿಕ, ಸಾಮಾಜಿಕ ವ್ಯವಸ್ಥೆಗಳು ಕಾರಣವಾಗಿ ಪರರ ಒಳಿತಿಗಾಗಿ ಇಂತಹ ಬಲಿದಾನ ಮರಣಗಳು ನಡೆದುಕೊಂಡು ಬಂದಿವೆ. ಹೀಗೆ ನೆಡೆದುಕೊಂಡು ಬಂದ ಬಲಿದಾನಗಳಲ್ಲಿ, ಲೌಕಿಕ ಬಲಿದಾನ ಮರಣ, ಧಾರ್ಮಿಕ ಬಲಿದಾನ ಮರಣ ಪ್ರಮುಖವಾಗಿವೆ. ಬಲಿದಾನ ಎಂಬುದು ಒಂದು ಅರ್ಥದಲ್ಲಿ ಆತ್ಮಾರ್ಪಣೆಯ ಮರಣವಾಗಿದ್ದು ಪರರ ಹಿತಕ್ಕಾಗಿ ತಮ್ಮ ಹಿತವನ್ನು ಮರಣದ ಮೂಲಕ ಬಿಟ್ಟು ಕೊಡುವುದಾಗಿದೆ. ಬಲಿದಾನವನ್ನು ಆತ್ಮಬಲಿ, ಆತ್ಮಬಲಿದಾನ ಎಂದು ಕರೆದರು ಇವುಗಳು ಆತ್ಮಹತ್ಯೆಗಳಲ್ಲ. ಇವು ಪ್ರಚೋದನಾತ್ಮಕ ಆತ್ಮಹತ್ಯೆಗಳಾಗಿವೆ. ಆತ್ಮ ಬಲಿದಾನದಲ್ಲಿ ವ್ಯಕ್ತಿಯೊಬ್ಬ ಸ್ವಇಚ್ಛೆಯಿಂದ ಧಾರ್ಮಿಕ, ಸಾಮಾಜಿಕ, ರಾಜಕೀಯದ ಕಾರಣದಿಂದ ತಮ್ಮ ಅಮೂಲ್ಯವಾದ ಪ್ರಾಣವನ್ನು ಬಲಿಕೊಟ್ಟುಕೊಂಡು ಪ್ರಾಣಾರ್ಪಣೆ ಮಾಡಿಕೊಳ್ಳುವುದಾಗಿದೆ.

ಭಾರತ ಮತ್ತು ಕರ್ನಾಟಕದಲ್ಲಿ ಇಂತಹ ಬಲಿದಾನ ಮರಣ ಸಂಪ್ರದಾಯಗಳು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿವೆ. ಇಂತಹ ಸಂಪ್ರದಾಯಗಳನ್ನು ನಡೆಸಿಕೊಳ್ಳುವ ವ್ಯಕ್ತಿಗಳ ತ್ಯಾಗ, ಆದರ್ಶ, ಮೌಲ್ಯಗಳು ಪರೋಪಕಾರದ ಮನೋಭಾವದಲ್ಲಿ ನಡೆದುಕೊಂಡು ಬಂದಿವೆ. ಆದರೂ ಇಂತಹ ಬಲಿದಾನಗಳಿಂದ ಜೀವಹತ್ಯೆಯಾಗಿರುವುದು ಖಂಡಿತವಾದ ಸತ್ಯವಾಗಿದೆ. ಮಧ್ಯಕಾಲೀನ ಸಾಹಿತ್ಯ ಸಂಸ್ಕೃತಿಯ ಸಂದರ್ಭದಲ್ಲಿ ಇಂತಹ ಆಚರಣೆ, ಸಂಪ್ರದಾಯಗಳು ಒಂದು ಪ್ರಶ್ನೆಯಾಗಿದ್ದು ಸ್ವಾರ್ಥದ ಕಾರಣದಲ್ಲಿ ನಡೆಯುವ ಬಲಿದಾನ ಮರಣದ ಜೀವಹತ್ಯೆಗಳನ್ನು ವಚನಕಾರರು ಪ್ರಶ್ನಿಸುವ ಮೂಲಕ ವಿರೋಧಿಸಿರುವುದನ್ನು ಕಾಣುತ್ತೇವೆ. ಈ ಯುಗದ ಸಾಹಿತ್ಯದಲ್ಲಿ ವಚನಕಾರರು ಬಹುಮುಖ್ಯವಾಗಿ ಲೌಕಿಕವಾಗಿ ನೆಡೆದುಕೊಂಡು ಬಂದ ತುರುಗೋಳ್, ಪೆಣ್ಬುಯ್ಯಲ್, ಜೋಳವಾಳಿ, ವೇಳೆವಾಳಿ, ಲೆಂಕವಾಳಿ, ಸೇವಕರ ಯುದ್ಧ ವೀರಮರಣಗಳನ್ನು ವಿರೋಧಿಸುವ ಮೂಲಕ ಪ್ರತಿಕ್ರಿಯೆ ನೀಡಿದ್ದಾರೆ. ಈ ಮೇಲೆ ಹೇಳಿದ ಆತ್ಮಬಲಿದಾನ ಮರಣ ಆದರ್ಶಗಳೆಲ್ಲವು ಪ್ರಿಯ ವ್ಯಕ್ತಿಯ ರಕ್ಷಣೆಗಾಗಿ ಅಲ್ಲದೆ ಅಂತಹವನ ದೇಶ ರಕ್ಷಣೆಗಾಗಿ ನಡೆಯುವಂತಹವುಗಳಾಗಿವೆ. ಇಂತಹ ಆದರ್ಶ ಮೌಲ್ಯಗಳನ್ನು ಅನುಸರಿಸಿ ಮರಣ ಪಡೆದರೆ ಸ್ವರ್ಗ, ಮೋಕ್ಷ ದೊರೆಯುತ್ತದೆ ಎಂದು ಅವರು ನಂಬಿದ್ದರು. ಇಂತಹ ಆಚರಣೆಗಳನ್ನು ಮಧ್ಯಕಾಲೀನ ಸಂದರ್ಭದಲ್ಲಿ ವಚನಕಾರರು ತಮ್ಮ ವೈಚಾರಿಕ ಮನೋಭಾವದಲ್ಲಿ ವಿರೋಧಿಸಿದ್ದಾರೆ. ಪ್ರಾಣ ಜೀವಹತ್ಯೆಗಳನ್ನು ಈ ಮೂಲಕ ತಡೆದಿದ್ದಾರೆ.

**ಅಡಿಟಿಪ್ಪಣಿಗಳು:–**


1. ಶ್ರೀನಿವಾಸಮೂರ್ತಿ, ಎಂ.ಆರ್: ಸಂ. ವಚನಧರ್ಮಸಾರ, ಕ.ಸಾ.ಪ,.ಬೆಂಗಳೂರು, 2006, ಪು.146.
2. ಬಸವರಾಜು, ಎಲ್.: ಸಂ. ಬಸವಣ್ಣನವರ ವಚನಗಳು, ಗೀತಾ ಬುಕ್ ಹೌಸ್, ಮೈಸೂರು, 2008, ಪು.75, ವ.164.
3. ಅದೇ.ಪು.125, ವ.376.
4. ಅದೇ.ಪು.126, ವ.382.
5. ಅದೇ.ಪು.126, ವ.383.
6. ಅದೇ.ಪು.64, ವ.118.
7. ಮರುಳಸಿದ್ಧಪ್ಪ, ಕೆ., ನಾಗರಾಜ, ಕಿ.ರಂ.: ಸಂ. ವಚನಕಮ್ಮಟ, ಸಪ್ನ ಬುಕ್ ಹೌಸ್, ಬೆಂಗಳೂರು, 2012, ಪು.11, ವ.43.